# ವಾಟ್ಸ್ಆ್ಯಪ್ ಗುಂಪಿನ ಕಿರಿಕಿರಿಯೇ?

ಪರಿಚಿತರಾಗಲಿ, ಅಪರಿಚಿತರಾಗಲಿ ನಿಮ್ಮ ವಾಟ್ಸ್ಆ್ಯಪ್ ಮೊಬೈಲ್ ಸಂಖ್ಯೆಯನ್ನು ಅನಗತ್ಯವಾಗಿ ಯಾವುದ್ಯಾವುದೋ ವಾಟ್ಸ್ಆ್ಯಪ್ ಗುಂಪುಗಳಿಗೆ ಆ್ಯಡ್ (ಸೇರ್ಪಡೆ) ಮಾಡುತ್ತಿದ್ದಾರೆಯೇ? ಅದರಿಂದ ನಿಮಗೆ ಕಿರಿಕಿರಿ ಉಂಟಾಗುತ್ತಿದೆಯೇ? ಅಥವಾ ವಾಟ್ಸ್ಆ್ಯಪ್ ಗುಂಪಿನಿಂದ ಹೊರಬಂದರೂ ಪದೇ ಪದೇ ನಿಮ್ಮನ್ನು ಆ ಗುಂಪಿಗೆ ಸೇರ್ಪಡೆ ಮಾಡಲಾಗುತ್ತಿದೆಯೇ? ಈ ಸಮಸ್ಯೆಗಳನ್ನು ಅನುಭವಿಸುತ್ತಿರುವವರ ನೆರವಿಗೆಂದೇ ವಾಟ್ಸ್ಆ್ಯಪ್ ಕಂಪನಿಯು ಒಂದು ಆಯ್ಕೆ ನೀಡಿದೆ. ಅದು ಬಹುತೇಕ ವಾಟ್ಸ್ಆ್ಯಪ್ ಬಳಕೆದಾರರಿಗೆ ಗೊತ್ತಿಲ್ಲ. ವಾಟ್ಸ್ಆ್ಯಪ್ ಗುಂಪಿಗೆ ಸೇರಿಸುವುದನ್ನು ತಡೆಯುವ ಆಪ್ಷನ್ ಬಗ್ಗೆ ಇಲ್ಲಿದೆ ಮಾಹಿತಿ.




- ವಾಟ್ಸ್ಆ್ಯಪ್‌ನ ಸೆಟ್ಟಿಂಗ್ಸ್‌ಗೆ ಹೋಗಿ. ಅಲ್ಲಿ ಕಾಣುವ ಅಕೌಂಟ್ಸ್ ಆಪ್ಷನ್ ಆಯ್ಕೆ ಕ್ಲಿಕ್ಕಿಸಿ.
- ಪ್ರೈವಸಿ ಆಪ್ಷನ್ ಒತ್ತಿದರೆ ಗ್ರೂಪ್ಸ್ (Groups) ಎಂಬ ಮತ್ತೊಂದು ಆಪ್ಷನ್ ಕಾಣಿಸುತ್ತದೆ
- ಗ್ರೂಪ್ಸ್ ಮೇಲೆ ಒತ್ತಿದರೆ 'ಎಲ್ಲರಿಗೂ' (Everyone), 'ನನ್ನ ಸಂಪರ್ಕಗಳು' (My Contacts) ಮತ್ತು 'ಯಾರಿಗೂ ಇಲ್ಲ' (Nobody) ಎಂಬ ಆಪ್ಷನ್‌ಗಳು ಕಾಣುತ್ತವೆ.
- ನಿಮ್ಮ ವಾಟ್ಸ್ಆ್ಯಪ್ ಸಂಖ್ಯೆಯನ್ನು ವಾಟ್ಸ್ಆ್ಯಪ್ ಗುಂಪುಗಳಿಗೆ ಸೇರಿಸಲು ಯಾರಿಗೆಲ್ಲ ಅವಕಾಶ ಕೊಡುತ್ತೀರಿ ಎಂಬುದರ ಸಂಕೇತಗಳಿವು. Everyone ಆಪ್ಷನ್ ಕ್ಲಿಕ್ಕಿಸಿದರೆ ನಿಮ್ಮ ವಾಟ್ಸ್ಆ್ಯಪ್ ನಂಬರ್ ಉಳ್ಳ ಎಲ್ಲರಿಗೂ, My Contacts ಆಪ್ಷನ್ ಕ್ಲಿಕ್ಕಿಸಿದರೆ ನಿಮ್ಮ ಮೊಬೈಲ್‌ನಲ್ಲಿ ಸೇವ್ ಆಗಿರುವ ವಾಟ್ಸ್ಆ್ಯಪ್ ನಂಬರ್ ಬಳಕೆದಾರರಿಗೆ ಮಾತ್ರ ನಿಮ್ಮನ್ನು ವಾಟ್ಸ್ಆ್ಯಪ್ ಗುಂಪುಗಳಿಗೆ ಸೇರಿಸಲು ಅವಕಾಶ ಕೊಟ್ಟಂತಾಗುತ್ತದೆ. ಒಂದು ವೇಳೆ ನೀವು ಯಾರಿಗೂ ಯಾವುದೇ ವಾಟ್ಸ್ಆ್ಯಪ್ ಗುಂಪುಗಳಿಗೆ ಸೇರಲು ಬಯಸಿದ್ದರೆ Nobody ಆಪ್ಷನ್ ಕ್ಲಿಕ್ಕಿಸಿದರಾಯಿತು.

---

# ಮೊಬೈಲ್ 'ಪವರ್ ಬಟನ್'ಗೆ ಪರ್ಯಾಯ

'ಪವರ್ ಬಟನ್' ಸಮಸ್ಯೆ ಸ್ಮಾರ್ಟ್‌ಫೋನ್‌ಗಳಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತದೆ. ಅದರಿಂದಾಗಿ ಸರಾಗವಾಗಿ ಮೊಬೈಲ್ ಬಳಕೆಗೆ ಅಡ್ಡಿಯುಂಟಾಗುತ್ತದೆ. ಅಂತಹ ಸಂದರ್ಭಗಳಲ್ಲಿ ತಕ್ಷಣ ಹೊಳೆಯುವುದು ಎರಡು ಸಾಧ್ಯತೆಗಳು: ಒಂದು, ಪವರ್ ಬಟನ್ ಬದಲಾಯಿಸಲು ಮೊಬೈಲ್ ಅನ್ನು ರಿಪೇರಿಗೆ ಕೊಡುವುದು. ಇಲ್ಲವೇ, ಹೊಸ ಫೋನ್ ಖರೀದಿಸುವ ಸಾಧ್ಯತೆ. ಇವೆರಡರ ಆಯ್ಕೆ ಇಲ್ಲದೆಯೂ ಪವರ್ ಬಟನ್ ಸಮಸ್ಯೆಯ ನಡುವೆ ಸ್ಮಾರ್ಟ್‌ಫೋನ್ ಅನ್ನು ಸರಾಗವಾಗಿ ಬಳಸಲು ಹಲವು ಮಾರ್ಗಗಳಿವೆ. ಅವುಗಳೆಂದರೆ,





ಗೆಶ್ಚರ್ ಫೀಚರ್: ಬಹುತೇಕ ಸ್ಮಾರ್ಟ್‌ಫೋನ್‌ಗಳಲ್ಲಿ ಗೆಶ್ಚರ್ (ಸೂಚನಾ) ಆಧಾರಿತ ಫೀಚರ್‌ಗಳಿರುತ್ತವೆ. ಡಿಸ್‌ಪ್ಲೇ ಮೇಲೆ ಡಬಲ್ ಟ್ಯಾಪ್ ಮಾಡಿದರೆ, ಸ್ವೈಪ್ ಮಾಡಿದರೆ ಹಾಗೂ ಮೊಬೈಲ್ ಅನ್ನು ಕೈಗೆತ್ತಿಕೊಳ್ಳುತ್ತಿದ್ದಂತೆ ಡಿಸ್‌ಪ್ಲೇ ಆನ್ ಆಗುವ ಸೌಲಭ್ಯಗಳು ಈ ಫೀಚರ್‌ನಿಂದ ಲಭ್ಯ. ಈ ಫೀಚರ್ ಅನ್ನು ಸೆಟ್ಟಿಂಗ್ಸ್‌ನಲ್ಲಿ ಆನ್ ಮಾಡುವುದರಿಂದ ಮೊಬೈಲ್ ಪವರ್ ಬಟನ್‌ನ ಅವಶ್ಯಕತೆ ಎದುರಾಗದು.

ಥರ್ಡ್ ಪಾರ್ಟಿ ಆ್ಯಪ್‌ಗಳ ಬಳಕೆ: ಪವರ್ ಬಟನ್ ಸಮಸ್ಯೆಗೆ ಪರಿಹಾರವಾಗಿ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಹಲವಾರು ಆ್ಯಪ್‌ಗಳಿವೆ. ಅವುಗಳ ಬಳಕೆಯಿಂದ ಪವರ್ ಬಟನ್ ಸಮಸ್ಯೆಯಿಂದ ಮುಕ್ತವಾಗಬಹುದು. ಉದಾಹರಣೆಗೆ, ಗೂಗಲ್ ಪ್ಲೇ ಸ್ಟೋರ್‌ನಲ್ಲಿ ವಾಲ್ಯೂಮ್ ಅನ್‌ಲಾಕ್ ಪವರ್ ಬಟನ್ ಫಿಕ್ಸ್ (Volume Unlock Power Button Fix) ಆ್ಯಪ್ ಅನ್ನು ಡೌನ್‌ಲೋಡ್ ಮಾಡಿ, ಅದನ್ನು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಲಾಕ್ ಆದ ಸ್ಕ್ರೀನ್ ಆಪ್ಷನ್ ಅನ್ನು ಆಕ್ಟಿವೇಟ್ ಮಾಡಿ, ವಾಲ್ಯೂಮ್ ಅನ್‌ಲಾಕ್ ಆನ್ ಮಾಡಬೇಕು. ಬಳಿಕ ಪರ್ಮಿಟ್ ಯೂಸೇಜ್ ಆಕ್ಸೆಸ್ ಅನ್ನೂ ಆನ್ ಮಾಡಬೇಕು. ಎನೇಬಲ್ ವಾಲ್ಯೂಮ್ ಅನ್‌ಲಾಕ್ ಹಾಗೂ ಸ್ಕ್ರೀನ್ ಆಫ್ ಅನ್ನು ಟರ್ನ್ ಆನ್ ಮಾಡಿ, ಪವರ್ ಬಟನ್ ಪರ್ಯಾಯವಾಗಿ ವಾಲ್ಯೂಮ್ ಬಟನ್ ಬಳಸಿ ಮೊಬೈಲ್ ಬಳಸಬಹುದು. ಹೆಚ್ಚಿನ ಮಾಹಿತಿಗೆ ಈ ಲಿಂಕ್‌ನ (www.youtube.com/watch?v=Ks4TWFuPBpM) ವಿಡಿಯೊ ನೋಡಿ.

# ಜಿ-ಮೇಲ್ ಸ್ಕೆಡ್ಯುಲಿಂಗ್

ಗೂಗಲ್ ಕಂಪನಿಯು ತನ್ನ ಜಿ–ಮೇಲ್ ಬಳಕೆದಾರರಿಗೆ ಯಾವುದೇ ರೀತಿಯ ತೊಡಕಾಗದಂತೆ ಎಚ್ಚರವಹಿಸಿ ಅಗತ್ಯ ಫೀಚರ್‌ಗಳನ್ನು ನೀಡಿದೆ. ಅದರಲ್ಲಿ ಜಿ–ಮೇಲ್ ಸ್ಕೆಡ್ಯುಲಿಂಗ್ ಸಹ ಒಂದು. ಸಾಕಷ್ಟು ದಿನಗಳ ಹಿಂದೆಯೇ ಸ್ಕೆಡ್ಯುಲಿಂಗ್ ಫೀಚರ್ ಅನ್ನು ಗೂಗಲ್ ಜಿ–ಮೇಲ್‌ನಲ್ಲಿ ಸೇರಿದ್ದರೂ ಬಹುತೇಕರಿಗೆ ಆ ಬಗ್ಗೆ ತಿಳಿದಿಲ್ಲ. ಸ್ಕೆಡ್ಯುಲಿಂಗ್ ಮಾಡುವುದು ಹೇಗೆ ಎಂಬುದಕ್ಕೆ ಉತ್ತರ ಇಲ್ಲಿದೆ.







- ಮೊದಲು ನಿಮ್ಮ ವೈಯಕ್ತಿಕ ಜಿ–ಮೇಲ್ ಐಡಿಯಿಂದ ಲಾಗಿನ್ ಆಗಿ.
- ಜಿ–ಮೇಲ್ ಓಪನ್ ಆದ ಬಳಿಕ ಕಂಪೋಸ್ ಆಪ್ಷನ್ ಕ್ಲಿಕ್ ಮಾಡಿ.
- ಮೇಲ್ ಐಡಿ ಎಂಟ್ರಿ ಮಾಡಿ, ಕಂಟೆಂಟ್ ತುಂಬಿಸಿ.
- ಸೆಂಡ್ ಆಪ್ಷನ್‌ನ ಪಕ್ಕದಲ್ಲೇ ಇರುವ ಮತ್ತೊಂದು ಆಪ್ಷನ್ ಕ್ಲಿಕ್ ಮಾಡಿದರೆ ಸ್ಕೆಡ್ಯುಲ್ ಸೆಂಡ್ ಎಂಬ ಬರಹ ಬಿತ್ತರವಾಗುತ್ತದೆ. ಅದನ್ನು ಕ್ಲಿಕ್ ಮಾಡಿದರೆ ಸ್ಕೆಡ್ಯುಲ್ ಟೈಮ್ ಎಂಬ ಟೂಲ್ ಬಾಕ್ಸ್ ಓಪನ್ ಆಗುತ್ತದೆ.
- ಆ ಟೂಲ್ ಬಾಕ್ಸ್‌ನಲ್ಲಿ ಕಾಣಿಸುವ ಪಿಕ್ ಡೇಟ್ ಆ್ಯಂಡ್ ಟೈಮ್ ಆಪ್ಷನ್ ಮೇಲೆ ಕ್ಲಿಕ್ಕಿಸಿ, ಜಿ–ಮೇಲ್ ತಲುಪಬೇಕಾದ ಸಮಯ ಹಾಗೂ ದಿನಾಂಕವನ್ನು ನಮೂದಿಸಿದರೆ ಸ್ಕೆಡ್ಯುಲಿಂಗ್ ಕಾರ್ಯ ಮುಕ್ತಾಯವಾಗುತ್ತದೆ. ■